**ಕರ್ನಾಟಕ ಲೋಕಾಯುಕ್ತ**

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1812/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 05/02/2022.

**ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ**

**ವಿಷಯ:** ಶ್ರೀ ಜಯಪ್ರಕಾಶ ಜಿ.ಎ. ಬಿನ್ ಲೇಟ್ ಜಿ. ಅಜ್ಜಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಹೊಸನಗರ ಉಪವಿಭಾಗ, ಹೆಚ್ಚುವರಿಯಾಗಿ ಪಂಚಾಯತ್‌ರಾಜ್ ಇಂಜನಿಯರಿಂಗ್ ಉಪವಿಭಾಗ, ಹೊಸನಗರ, ಶಿವಮೊಗ್ಗ ಜಿಲ್ಲೆ ಇವರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕಾರಣ ಇವರ ವಿರುದ್ದದ ನಡವಳಿ ಕುರಿತು.

*****

1. ಮೈಸೂರು ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಜಯಪ್ರಕಾಶ ಜಿ.ಎ. ಬಿನ್ ಲೇಟ್ ಜಿ. ಅಜ್ಜಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಹೊಸನಗರ ಉಪವಿಭಾಗ, ಹೆಚ್ಚುವರಿಯಾಗಿ ಪಂಚಾಯತ್‌ರಾಜ್ ಇಂಜನಿಯರಿಂಗ್ ಉಪವಿಭಾಗ, ಹೊಸನಗರ, ಶಿವಮೊಗ್ಗ ಜಿಲ್ಲೆ, ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). ಶ್ರೀ ಸುನೀಲ್ ಎಸ್ ತಂದೆ ಸತೀಶ್ ಚಂದ್ರ, ಕ್ಲಾಸ್ -2 ಗುತ್ತಿಗೆದಾರರು, ವಾಸ: ಶ್ರೀ ಚೆನ್ನವೀರಪಂಚಾಕ್ಷರ ನಿವಾಸ, ಅಪಾರ್ಟ್‌ಮೆಂಟ್ ಡೋರ್ ನಂ. 01, 9ನೇ ವಾರ್ಡ್, ವಿನಾಯಕ ಪಾರ್ಕ್ ಹತ್ತಿರ, ಬಸವನಗುಡಿ, ಶಿವಮೊಗ್ಗ ಜಿಲ್ಲೆ, (ಇನ್ನು ಮುಂದೆ ಇವರನ್ನು ದೂರುದಾರರೆಂದು ಉಲ್ಲೇಖಿಸಲಾಗುವುದು). ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸವನ್ನು ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1812/2021

ಎಂದು ಸಲ್ಲಿಸಿದ ವರದಿಯ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ಸಾರಾಂಶ**:- ದೂರುದಾರರು ಸುಮಾರು ಐದು ವರ್ಷದಿಂದ ಕ್ಲಾಸ್-2 ಗುತ್ತಿಗೆದಾರರಾಗಿ ಸರ್ಕಾರದ ಅನುದಾನಗಳನ್ನು ಉಪಯೋಗಿಸಿಕೊಂಡು ಲೋಕೋಪಯೋಗಿ ಇಲಾಖೆ, ಪಂಚಾಯತ್‌ರಾಜ್, ನಿರ್ಮಿತಿ ಕೇಂದ್ರದ ಕೆಲಸಗಳನ್ನು ನಿಯಮಾನುಸಾರ ಟೆಂಡರ್ ಮೂಲಕ ಪಡೆದುಕೊಂಡು ಕೆಲಸಗಳನ್ನು ಪೂರ್ಣಗೊಳಿಸಿ ಬಿಲ್ಲುಗಳ ಮೂಲಕ ಹಣವನ್ನು ಪಡೆಯುತ್ತಿರುತ್ತಾರೆ. ದೂರುದಾರರು ದಿ: 17/06/2016 ರಂದು ಹೊಸನಗರ ತಾಲ್ಲೂಕು ರಿಪ್ಪನ್ ಪೇಟೆ ಗ್ರಾಮ ಪಂಚಾಯತಿ ವಿನಾಯಕ ನಗರ ದೇವಸ್ಥಾನದ ಹಿಂಭಾಗ ಅಂಗನವಾಡಿ ಕಟ್ಟಡದ ಕಾಮಗಾರಿಯನ್ನು ಅಂದಾಜು ಮೊತ್ತ ರೂ. 9,10,702/- ಗಳಿಗೆ ಕರಾರು ಮೂಲಕ ಒಪ್ಪಿಕೊಂಡು ದಿನಾಂಕ 26/06/2016 ರಂದು ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಿ ಮೇಲ್ಛಾವಣಿಯ ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ. ಹೀಗಾಗಿ ಈವರೆಗೆ ನಿರ್ವಹಿಸಿದ ಕಾಮಗಾರಿಯ ಮೊದಲನೇ ಹಂತದ ಮೊತ್ತ ಸುಮಾರು ರೂ. 4,82,000/- ಗಳನ್ನು ಪಡೆಯಲು ಕಾಮಗಾರಿಯ ಬಿಲ್ಲನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಎಂ.ಬಿ. (ಅಳತೆ ಪುಸ್ತಕ) ಗಳನ್ನು ಎದುರುದಾರರು ಸಿದ್ದಪಡಿಸಿ ಸರಿ ಮಾಡಿ ಕಾರ್ಯಪಾಲಕ ಅಭಿಯಂತರು, ಸಾಗರ ರವರ ಕಛೇರಿಗೆ ಕಳುಹಿಸಿಕೊಡಲು ಕಾಮಗಾರಿ ಮೊತ್ತಕ್ಕೆ 3% ಅಂದರೆ ಒಟ್ಟು 15,000/- ರೂ.ಗಳನ್ನು ಲಂಚವಾಗಿ ನೀಡುವಂತೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರು ದಿನಾಂಕ 29/09/2016 ರಂದು ಬೆಳಿಗ್ಗೆ ಸುಮಾರು 11-00 ಘಂಟೆಗೆ ಎದುರುದಾರರ ಕಛೇರಿಗೆ ಹೋಗಿ ಎದುರುದಾರರ ಸಿದ್ಧಪಡಿಸಿದ ದಾಖಲಾತಿಗಳನ್ನು ಸಾಗರಕ್ಕೆ ಕಳುಹಿಸಿಕೊಡಲು ಎದುರುದಾರರನ್ನು ಕೇಳಲಾಗಿ ಎದುರುದಾರರು ಮೇಲ್ಕಂಡ ಕಾಮಗಾರಿಯ ಮೊತ್ತಕ್ಕೆ 3% ಹಣವನ್ನು ಕೊಟ್ಟರೆ ಮಾತ್ರ ಕಳುಹಿಸಿಕೊಡುವುದಾಗಿ ತಿಳಿಸಿರುತ್ತಾರೆ. ದೂರುದಾರರು ಮರುದಿನ ಬಂದು ಹಣವನ್ನು ನೀಡುವುದಾಗಿ ಹೇಳಿ ವಾಪಸ್ ಬಂದಿರುತ್ತಾರೆ. ದಿ: 30/09/2016 ರಂದು ದೂರುದಾರರು ಗೋಪಾಲ ಪಾಳದಲ್ಲಿದ್ದಾಗ ಮಧ್ಯಾಹ್ನ ಸುಮಾರು 2-00 ಘಂಟೆಗೆ ಎದುರುದಾರರು ಶಿವಮೊಗ್ಗದಿಂದ ತಮ್ಮ ಮೊಬೈಲ್ ಸಂಖ್ಯೆ 9448681829 ಮುಖಾಂತರ ದೂರುದಾರರ ಮೊಬೈಲ್ ನಂ. 9972915432 ಗೆ ಕರೆ ಮಾಡಿ "ನೀನು ಸುಮ್ಮನೆ ಸಮಯ ವ್ಯರ್ಥ ಮಾಡುತ್ತಿದ್ದಿ, ಬೇರೆ ಕಥೆಗಳನ್ನು ಹೇಳುತ್ತಿದ್ದೀಯಾ, ನನಗೆ ಕೊಡಬೇಕಾದ ಕಾಮಗಾರಿ ಮೊತ್ತದ

3% ಅಂದರೆ ಒಟ್ಟೂ 15,000/- ರೂ.ಗಳಲ್ಲಿ 5,000/- ರೂ.ಗಳನ್ನು ನಿನಗೆ ಕನ್ಸೆಶನ್ ಕೊಡುತ್ತೇನೆ, ಉಳಿದ 10,000/- ರೂ.ಗಳನ್ನು ಈ ದಿನ ಸಂಜೆ ನನಗೆ ತಪ್ಪದೇ ತಂದುಕೊಡಬೇಕೆಂದು" ಹೇಳಿರುತ್ತಾರೆ ಈ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲಿನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

3. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 01/10/2016 ರಂದು ಬೆಳಿಗ್ಗೆ 11-0 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಶಿವಮೊಗ್ಗ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 03/2016 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಎಸ್.ಎಚ್. ಸುರೇಶ ಬಿನ್ ಎಸ್ ಹನುಮಂತಪ್ಪ ಮತ್ತು ಶ್ರೀ ಡಿ ಮಲ್ಲಿಕಾರ್ಜುನ ಬಿನ್ ಮಲ್ಲಪ್ಪ ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯಿಸಿ ಪ್ರಥಮ ವರ್ತಮಾನ ವರದಿಯನ್ನು ಪಂಚರಿಗೆ ತೋರಿಸಿ ದೂರನ್ನು ಓದಿ ಹೇಳಿರುತ್ತಾರೆ. ಆ ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ ಎದರುದಾರರು ಲಂಚವನ್ನು ಕೇಳಿರುವುದಕ್ಕೆ ಸಂಬಂಧಿಸಿದ ವಾಯ್ಸ್ ರೆಕಾರ್ಡವಾಗಿರುವ ಮೊಬೈಲ್‌ನ್ನು, ದೂರನ್ನು ಹಾಜರಪಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಮೊಬೈಲ್‌ನ್ನು ಡಾಟಾ ಕೇಬಲ್ ಮೂಲಕ ಲ್ಯಾಪಟಾಪ್‌ಗೆ ಹಾಕಿಸಿ ಆನ್ ಮಾಡಿ ಪಂಚರಿಗೆ ಕೇಳಿಸಿರುತ್ತಾರೆ. ತನಿಖಾಧಿಕಾರಿಗಳು ಮೊಬೈಲ್‌ನಲ್ಲಿ ರೆಕಾರ್ಡ ಆಗಿರುವ ಸಂಭಾಷಣೆಯನ್ನು ಲ್ಯಾಪಟಾಪ್‌ನಲ್ಲಿ ಡೌನಲೋಡ ಮಾಡಿಕೊಂಡು ಎರಡು ಸಿಡಿಗಳಿಗೆ ಕಾಫಿ ಮಾಡಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಲಂಚವಾಗಿ ಕೊಡಬೇಕೆಂದಿರುವ ರೂ. 10,000/- ಗಳನ್ನು ಹಾಜರಪಡಿಸುವಂತೆ ದೂರುದಾರರಿಗೆ ತಿಳಿಸಿದಾಗ ದೂರುದಾರರು ರೂ. 500/- ಮುಖಬೆಲೆಯ 20 ನೋಟುಗಳನ್ನು ತನಿಖಾಧಿಕಾರಿಯ ಟೇಬಲ್ ಮೇಲೆ ಹಾಜರಪಡಿಸಿರುತ್ತಾರೆ. ದೂರುದಾರರು ಎದರುದಾರರಿಗೆ ಲಂಚವಾಗಿ ಕೊಡಬೇಕೆಂದಿರುವ ರೂ. 10,000/- ಗಳನ್ನು ಪಂಚರು ಪರಿಶೀಲಿಸಿ ಅವುಗಳ ಮೌಲ್ಯ ಮತ್ತು ಕ್ರಮ ಸಂಖ್ಯೆಗಳನ್ನು ನಮೂದಿಸಿಕೊಂಡಿರುತ್ತಾರೆ. ಆನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ ಅವರ ಸಿಬ್ಬಂದಿಯವರು ದೂರುದಾರರು ಹಾಜರಪಡಿಸಿದ ನೋಟುಗಳಿಗೆ

ಪ್ರತ್ಯೇಕವಾಗಿ ಫಿನಾಪ್ತಲಿನ್ ಪುಡಿಯನ್ನು ಸವರಿರುತ್ತಾರೆ. ಆನಂತರ ಪಂಚ-2 ರವರು ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ತಮ್ಮ ಬಲಗೈಯಿಂದ ತೆಗೆದುಕೊಂಡು ಎರಡು ಕೈಗಳಿಂದ ಎಣಿಸಿ ತನಿಖಾಧಿಕಾರಿಯ ಟೇಬಲ್ ಮೇಲೆ ಇಟ್ಟಿರುತ್ತಾರೆ. ನಂತರ ಪಂಚ-2 ರವರು ಸೋಡಿಯಂ ಕಾರ್ಬೋನೈಟ್ ದ್ರಾವಣದಲ್ಲಿ ತಮ್ಮ ಎರಡು ಕೈಗಳ ಬೆರಳುಗಳನ್ನು ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆ ಆಗಿರುತ್ತದೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-2 ರವರು ದೂರುದಾರರ ಅಂಗ ಶೋಧನೆಯನ್ನು ಮಾಡಿ ಫಿನಾಪ್ತಲಿನ್ ಪುಡಿಯನ್ನು ಸವರಿದ ಒಟ್ಟು ರೂ. 10,000/- ನೋಟುಗಳನ್ನು ದೂರುದಾರರು ಧರಿಸಿದ್ದ ಪ್ಯಾಂಟಿನ ಬಲಭಾಗದ ಮುಂಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ದೂರುದಾರರು ಎದುರುದಾರರ ಬಳಿ ಹೋಗಿ ಅಲ್ಲಿ ಎದುರುದಾರರನು ಭೇಟಿ ಮಾಡಿ ತಮ್ಮ ಕಾಮಗಾರಿಯ ಬಿಲ್ಲುಗಳು ಎಂ.ಬಿ. ಪುಸ್ತಕದ ಬಗ್ಗೆ ಕೇಳಬೇಕೆಂದು, ಆಗ ಎದುರುದಾರರು ಲಂಚದ ಬಗ್ಗೆ ಪ್ರಸ್ತಾಪಿಸಿದರೆ ಅವರಿಗೆ ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ಕೊಡಬೇಕೆಂದು, ಆ ನೋಟುಗಳನ್ನು ಎದುರುದಾರರು ಸ್ವೀಕರಿಸಿದ ನಂತರ ಅಲ್ಲಿಂದ ಹೊರಗಡೆ ಬಂದು ತಮ್ಮ ಎಡಗೈಯಿಂದ ಕರ್ಚಿಪ್‌ನಲ್ಲಿ ತಮ್ಮ ಮುಖವನ್ನು ಒರೆಸಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡುವಂತೆ ತನಿಖಾಧಿಕಾರಿಯವರು ದೂರುದಾರರಿಗೆ ಸೂಚನೆಯನ್ನು ನೀಡಿರುತ್ತಾರೆ. ಪಂಚ-1 ರವರಿಗೆ ಆ ಸಂಧರ್ಭದಲ್ಲಿ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ದೂರುದಾರರು ಮತ್ತು ಎದುರುದಾರರ ನಡುವೆ ನಡೆಯುವ ಸಂಭಾಷಣೆಯನ್ನು ಕೇಳಿಸಿಕೊಂಡು ಅಲ್ಲಿನ ವಿದ್ಯಾಮಾನಗಳನ್ನು ಗಮನಿಸಿದ ನಂತರ ಈ ಬಗ್ಗೆ ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ತಮ್ಮ ಮೊಬೈಲ್‌ನಲ್ಲಿ ಎದುರುದಾರರನ್ನು ಭೇಟಿ ಮಾಡಲು ಹೋಗುವಾಗ ಆನ್ ಮಾಡಿಕೊಂಡು ಹೋಗಿ ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 01/10/2016 ರಂದು ಮಧ್ಯಾಹ್ನ 12-00 ಘಂಟೆಯಿಂದ 1-30 ಘಂಟೆಯವರೆಗೆ ಶಿವಮೊಗ್ಗ ಎಸಿಬಿ ಕಛೇರಿಯಲ್ಲಿ ಲ್ಯಾಪಟಾಪ್ ಮೂಲಕ ಗಣಕೀಕರಣ ಮಾಡಿಸಿ ವಹಿಸಿಕೊಡುವ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5. ತನಿಖಾಧಿಕಾರಿಗಳು ದಿನಾಂಕ 01/10/2016 ರಂದು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ಇಲಾಖಾ ವಾಹನಗಳಲ್ಲಿ ಠಾಣೆಯಿಂದ ಹೊರಟು ವಿನೋಬಾ ನಗರ ಪೊಲೀಸ್ ಚೌಕಿಯ ಹತ್ತಿರ ಇರುವ ಮೋರ್ ಬಳಿ ಜೀಪು ಮತ್ತು ಕಾರನ್ನು ನಿಲ್ಲಿಸಿ, ತನಿಖಾಧಿಕಾರಿಗಳು ದೂರುದಾರರು ಹಾಗೂ ಪಂಚ-1 ರವರನ್ನು ಜೀಪಿನಿಂದ ಇಳಿಸಿ ಅವರಿಗೆ ವಹಿಸಿಕೊಡುವ ಪಂಚನಾಮೆಯ ಸಮಯದಲ್ಲಿ ನೀಡಿದ ಸೂಚನೆಯಂತೆ ನಡೆದುಕೊಳ್ಳಬೇಕೆಂದು ತಿಳಿಸಿರುತ್ತಾರೆ. ಅವರಿಬ್ಬರೂ ಕಾಲು ನಡಿಗೆಯಲ್ಲಿ ವೆಲ್‌ಕಂ ಟೇಸ್ಟ್ & ಈಟ್, ವೆಜ್ & ನಾನ್ ವೆಜ್ ಫಾಸ್ಟ್ ಫುಡ್ ಹೊಟೇಲ್ ಒಳಗಡೆ ಹೋಗಿ ಎದುರುದಾರರಿಗೆ ಭೇಟಿ ಮಾಡಿದಾಗ ಎದುರುದಾರರು ದೂರುದಾರರಿಗೆ ಹಣ ತಂದಿರುವ ಬಗ್ಗೆ ಕೇಳಿದಾಗ ದೂರುದಾರರು ತಂದಿರುವುದಾಗಿ ತಿಳಿಸಿದಾಗ ಎದುರುದಾರರು ಕೊಡುವಂತೆ ಎಡಗೈ ಚಾಚಿದಾಗ ದೂರುದಾರರು ಎದರುದಾರರಿಗೆ ಕೊಡಬೇಕು ಎಂದಿದ್ದ ಲಂಚದ ಹಣ ರೂ. 10,000/- ಗಳನ್ನು ತಮ್ಮ ಪ್ಯಾಂಟಿನ ಬಲಭಾಗದ, ಮುಂಭಾಗದ ಜೇಬಿನಿಂದ ತೆಗೆದು ಕೊಟ್ಟಾಗ ಎದರುದಾರರು ಆ ಹಣವನ್ನು ತಮ್ಮ ಎಡಗೈಯಿಂದ ಪಡೆದುಕೊಂಡು ತಮ್ಮ ಪ್ಯಾಂಟಿನ ಎಢಭಾಗದ ಹಿಂಬದಿಯ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಪಂಚ-1 ರವರು ಪಕ್ಕದ ಟೇಬಲ್ ಬಳಿ ಇರುವ ಕುರ್ಚಿಯಲ್ಲಿ ಕುಳಿತು ವೀಕ್ಷಿಸಿರುತ್ತಾರೆ. ನಂತರ ದೂರುದಾರರು ಹೊಟೇಲ್‌ನಿಂದ ಹೊರಗೆ ಬಂದು ಕರ್ಚಿಪ್‌ನಿಂದ ಮುಖ ಒರಿಸಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡಿರುತ್ತಾರೆ. ಆಗ ತನಿಖಾಧಿಕಾರಿಗಳು ಅಲ್ಲಿಗೆ ಬಂದು ಎದುರುದಾರರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಪರಿಚಯ ಮಾಡಿಕೊಂಡು ಎದುರುದಾರರಿಗೆ ಪಂಚರ ಹಾಗೂ ಸಿಬ್ಬಂದಿಯವರ ಪರಿಚಯವನ್ನು ಮಾಡಿಕೊಟ್ಟು ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ 1988 ರ ಅಡಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರ ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ಅದೇ ರೀತಿ ಎದುರುದಾರರ ಬಲಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣದ ಬಣ್ಣದಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. ಆನಂತರ ತನಿಖಾಧಿಕಾರಿಯವರು ಎದುರುದಾರರಿಗೆ ದೂರುದಾರರಿಂದ ಪಡೆದುಕೊಂಡ ಲಂಚದ ಹಣ ರೂ. 10,000/- ಗಳನ್ನು ಹಾಜರಪಡಿಸಲು

ತಿಳಿಸಿದಾಗ ಎದುರುದಾರರು ತಾನು ಧರಿಸಿದ್ದ ಪ್ಯಾಂಟಿನ ಎಡಭಾಗದ ಹಿಂದಿನ ಜೇಬಿನಿಂದ ಲಂಚದ ಹಣವನ್ನು ತೆಗೆದು ಹಾಜರಪಡಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚರಿಬ್ಬರು ಆ ನೋಟುಗಳ ಮೌಲ್ಯ ಮತ್ತು ಕ್ರಮ ಸಂಖ್ಯೆಗಳನ್ನು ವಹಿಸಿಕೊಡುವ ಪಂಚನಾಮೆಯಲ್ಲಿ ನಮೂದಿಸಿರುವ ನೋಟುಗಳ ಮೌಲ್ಯ ಮತ್ತು ಕ್ರಮ ಸಂಖ್ಯೆಗಳಿಗೆ ತಾಳೆಯಾಗಿರುತ್ತದೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಬೇರೆ ಪಂಚೆಯನ್ನು ತರಿಸಿ ಎದುರುದಾರರು ಧರಿಸಿರುವ ಪ್ಯಾಂಟನ್ನು ಬಿಚ್ಚಿಕೊಡುವಂತೆ ತಿಳಿಸಿದಾಗ ಎದುರುದಾರರು ತಾವು ಧರಿಸಿದ್ದ ಪ್ಯಾಂಟನ್ನು ಬಿಚ್ಚಿ ಪಂಚೆಯನ್ನು ಹಾಕಿಕೊಂಡಿರುತ್ತಾರೆ. ನಂತರ ಎದುರುದಾರರು ಬಿಚ್ಚಿಕೊಟ್ಟ ಪ್ಯಾಂಟಿನ ಎಡಭಾಗದ ಹಿಂಬದಿಯ ಜೇಬಿನ ಒಳಭಾಗವನ್ನು ಮತ್ತೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಆ ನಂತರ ತನಿಖಾಧಿಕಾರಿಯವರು ದೂರುದಾರರಿಗೆ ವಹಿಸಿಕೊಡುವ ಪಂಚನಾಮೆ ಕಾಲದಲ್ಲಿ ಎದುರುದಾರರನ್ನು ಭೇಟಿ ಮಾಡುವ ಸಮಯದಲ್ಲಿ ತಮ್ಮ ಮೊಬೈಲ್‌ನಲ್ಲಿ ಸಂಭಾಷಣೆಯನ್ನು ರೆರ್ಕಾಡ್ ಮಾಡಿಕೊಳ್ಳಲು ತಿಳಿಸಿದ್ದ ಮೊಬೈಲ್‌ನ್ನು ಹಾಜರಪಡಿಸಲು ತಿಳಿಸಿದಾಗ ಅವರು ತಾವು ಧರಿಸಿದ್ದ ಪ್ಯಾಂಟಿನ ಎಡಭಾಗದ ಮುಂದಿನ ಜೇಬಿನಿಂದ ಮೊಬೈಲ್ ಸೆಟ್‌ನ್ನು ಹಾಜರಪಡಿಸಿದಾಗ ತನಿಖಾಧಿಕಾರಿಯವರು ಮೊಬೈಲ್ ಸೆಟ್‌ನ್ನು ಆನ್ ಮಾಡಿ ಸಂಭಾಷಣೆಯನ್ನು ಕೇಳಿದಾಗ ಅದರಲ್ಲಿ ಸಂಭಾಷನೆ ರೆರ್ಕಾಡ್ ಆಗದೆ ಇರುವುದು ಕಂಡು ಬಂದಿರುತ್ತದೆ. ಆ ನಂತರ ತನಿಖಾಧಿಕಾರಿಗಳು ಪ್ಯಾಂಟ್ ಹಾಗೂ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಡೆದ ಘಟನೆ ಬಗ್ಗೆ ವಿಚಾರಿಸಿದಾಗ ಅವರು ಘಟನೆಯನ್ನು ಯಥಾವತ್ತಾಗಿ ವಿವರಿಸಿರುತ್ತಾರೆ. ಅದೇ ರೀತಿ ತನಿಖಾಧಿಕಾರಿಯವರು ದೂರುದಾರರನ್ನು ಹಿಂಬಾಲಿಸಿ ಹೋಗಿದ್ದ ಪಂಚ-1 ರವರಿಗೆ ವಿಚಾರಿಸಿದಾಗ ಅವರು ಸಹ ದೂರುದಾರರು ನುಡಿದ ಪ್ರಕಾರ ನುಡಿದಿರುತ್ತಾರೆ. ಆ ನಂತರ ತನಿಖಾಧಿಕಾರಿಯವರು ಎದುರುದಾರರಿಗೆ ದೂರುದಾರರಿಂದ ರೂ. 10,000/- ಗಳನ್ನು ಲಂಚವಾಗಿ ಕೇಳಿ ಪಡೆದುಕೊಂಡ ಸಂದರ್ಭದ ಬಗ್ಗೆ ವಿಚಾರಿಸಿದಾಗ ಎದುರುದಾರರು ತಮ್ಮ ಸಮಜಾಯಿಷಿಯನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಟ್ಟಿದ್ದು, ಅದರಲ್ಲಿ “ನಾನು ದಿ:29-09-2016 ರಂದು ಸುನೀಲ ಗುತ್ತಿಗೆದಾರರು ಇವರು ನಿರ್ವಹಿಸಿರುವ ರಿಪ್ಪನಪೇಟೆ ಅಂಗನವಾಡಿ

ಕಟ್ಟಡ ನಿರ್ಮಾಣ ಕಾಮಗಾರಿ ನಿರ್ವಹಿಸುತ್ತಿದ್ದು, ಕಾಮಗಾರಿಯ ಬಿಲ್ಲನ್ನು ದಿ: 29-09-2016 ರಂದು ಸಹಿ ಮಾಡಿಕೊಟ್ಟಿರುತ್ತೇನೆ. ದಿ: 01-10-2016 ರಂದು ಮನೆಯಲ್ಲಿ ದೇವರ ಕಾರ್ಯವಿರುವುದ್ದರಿಂದ ಸದರಿ ದಿನಾಂಕದಂದು ಕಛೇರಿಗೆ ರಜೆ ಹಾಕಿರುತ್ತೇನೆ. ದಿ: 30-09-2016 ರಂದು ಸುಮಾರು 12 ಗಂಟೆಗೆ ಬಸವನಗುಡಿ ಲೋಕೋಪಯೋಗಿ ಇಲಾಖೆ ವಸತಿ ಗೃಹದ ಹತ್ತಿರ ಸುನೀಲ ಅವರೇ ನನ್ನನ್ನು ಭೇಟಿ ಮಾಡಿ ನಿಮಗೆ ಹಣ ಕೊಡಬೇಕು ನಂತರದಲ್ಲಿ ಕೊಡುತ್ತೇನೆಂದು ತಿಳಿಸಿದಾಗ ನಾನು ಹಣದ ಅವಶ್ಯವಿರುವುದಿಲ್ಲ ನಾನು ನಿಮ್ಮ ಬಿಲ್ಲನ್ನು ಈಗಾಗಲೇ ಸಹಿ ಮಾಡಿ ಕೊಟ್ಟಿರುತ್ತೇನೆಂದು ತಿಳಿಸಿರುತ್ತೇನೆ. ದಿ: 01-10-2016 ರಂದು ಮಧ್ಯಾಹ್ನ 1.00 ಗಂಟೆಗೆ ದೂರವಾಣಿ ಮುಖಾಂತರ ನಿಮಗೆ ಹಣ ಕೊಡುತ್ತೇವೆ ಬನ್ನಿರಿ ಎಂದು ತಿಳಿಸಿರುತ್ತಾರೆ. ಮೇಲ್ಕಂಡ ಎಲ್ಲಾ ವಿವರಣೆಗಳನ್ನು ನೀಡಿ ನನ್ನದು ಯಾವುದೆ ತಪ್ಪಿರುವುದಿಲ್ಲ" ವೆಂದು ಬರೆದುಕೊಟ್ಟ ಸಮಜಾಯಿಷಿಯ ಬಗ್ಗೆ ದೂರುದಾರರು ಹಾಗೂ ಪಂಚ-1 ರವರಿಗೆ ವಿಚಾರಿಸಿದಾಗ ಅವರಿಬ್ಬರು ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತಿಳಿಸಿರುವುದು ಸುಳ್ಳಾಗಿದ್ದು, ಎದುರುದಾರರು ಲಂಚವನ್ನು ಕೇಳಿ ಪಡೆದುಕೊಂಡರು ಎಂದು ತಿಳಿಸಿರುತ್ತಾರೆ. ಆ ನಂತರ ತನಿಕಾಧಿಕಾರಿಯವರು ಎದುರುದಾರರನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

6. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

7. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ನಿಮ್ಮ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

8. ನಂತರ ಎದುರುದಾರರಿಂದ ಸದರಿ ಆರೋಪಗಳಿಗೆ ಸಬಂಧಪಟ್ಟಂತೆ, ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಅವರಿಂದ ಆಕ್ಷೇಪಣೆಗಳನ್ನು ಕೇಳಲಾಯಿತು. ಎದುರುದಾರರು ತಮ್ಮ ಸಮಜಾಯಿಸಿಯನ್ನು ದಿನಾಂಕ 11/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ "ದೂರುದಾರರ ಕಾಮಗಾರಿ ಕಳಪೆ ಎಂದು ನಾನು ಅವರಿಗೆ ಹೇಳಿರುವುದು, ಕೀಳು

ಗುಣಮಟ್ಟದ ಮರಳನ್ನು ಕಾಮಗಾರಿಗೆ ಉಪಯೋಗಿಸಲು ನಾನು ಅನುಮತಿ ನೀಡಿರುವುದಿಲ್ಲ. ಇವೆಲ್ಲ ಕಾರಣಗಳಿಂದ ದೂರುದಾರರು ನನ್ನ ಮೇಲೆ ಅಸಮಾಧಾನಗೊಂಡು ನನ್ನಿಂದ ಯಾವುದೇ ಕೆಲಸ ಬಾಕಿ ಇಲ್ಲದಿದ್ದರೂ ಸಹ ನನ್ನ ವಿರುದ್ದ ಒಂದು ವ್ಯವಸ್ಥಿತ ಜಾಲ ಹೆಣೆದು ಸುಳ್ಳು ದೂರನ್ನು ನೀಡಿ ನನಗೆ ತೊಂದರೆಯನ್ನು ನೀಡಿದ್ದಾರೆಂದು" ಆಪಾದನೆಗಳನ್ನು ಅಲ್ಲಗಳೆಯುವುದರ ಹೊರತಾಗಿ ಅದಕ್ಕೆ ಪೂರಕವಾದ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರು ನೀಡಿರುವ ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡು ಬರುವುದಿಲ್ಲ.

9. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾಖುಇಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು ಕ್ಲಾಸ್-2 ಗುತ್ತಿಗೆದಾರರಾಗಿದ್ದು, ದೂರುದಾರರು ದಿ: 17-06-2016 ರಂದು ಹೊಸನಗರ ತಾಲ್ಲೂಕು ರಿಪ್ಪನಪೇಟೆ ಗ್ರಾಮ ಪಂಚಾಯತಿ ವಿನಾಯಕ ನಗರ ದೇವಸ್ಥಾನ ಹಿಂಭಾಗ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅಂದಾಜು ಮೊತ್ತ ರೂ. 9,10,702/- ಗಳಿಗೆ ಕರಾರು ಮೂಲಕ ಒಪ್ಪಿಕೊಂಡಿದ್ದು, ದಿ: 26-06-2016 ರಂದು ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಿ ಮೇಲ್ಛಾವಣಿಯ ಕಾಮಗಾರಿಯನ್ನು ಪೂರ್ಣಗೊಳಿಸಿ ಈವರೆಗೆ ನಿರ್ವಹಿಸಿದ ಕಾಮಗಾರಿಯ ಮೊದಲನೆ ಹಂತದ ಮೊತ್ತ ಸುಮಾರು ರೂ. 4,82,000/-ಗಳನ್ನು ಪಡೆಯಲು ಕಾಮಗಾರಿಯ ಬಿಲ್ಲುಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಎಂಬಿ ಪುಸ್ತಕಗಳನ್ನು ಎದುರುದಾರರು ಸಿದ್ದಪಡಿಸಿ ಸಹಿ ಮಾಡಿ ಕಾರ್ಯ ಪಾಲಕ ಅಭಿಯಂತರರು ಸಾಗರರವರ ಕಛೇರಿಗೆ ಕಳುಹಿಸಿಕೊಡಲು ಕಾಮಗಾರಿ ಮೊತ್ತಕ್ಕೆ 3% ಅಂದರೆ ಒಟ್ಟು ರೂ. 15,000/- ಗಳನ್ನು ನೀಡುವಂತೆ ಬೇಡಿಕೆಯಿಟ್ಟಿದ್ದು, ದೂರುದಾರರು ದಿ: 29-09-2016 ರಂದು ಬೆಳ್ಳಿಗೆ 11.00 ಗಂಟೆಗೆ ಹೊಸನಗರದ ಎದುರುದಾರರ ಕಛೇರಿಯ ಬಳಿ ಹೋಗಿ ಸಿದ್ದಪಡಿಸಿದ ದಾಖಲಾತಿಗಳನ್ನು ಸಾಗರಕ್ಕೆ ಕಳುಹಿಸಿಕೊಡಲು ಎದುರುದಾರರನ್ನು ಕೇಳಲಾಗಿ ಕಾಮಗಾರಿಯ ಮೊತ್ತಕ್ಕೆ 3% ಹಣವನ್ನು ಕೊಟ್ಟರೆ ಮಾತ್ರ ಕಳುಹಿಸಿಕೊಡುವುದಾಗಿ ತಿಳಿಸಿದ್ದರಿಂದ ದಿ; 30-09-2016 ರಂದು

ದೂರುದಾರರು ತಮ್ಮ ಮೊಬೈಲ್‌ನಿಂದ ಎದುರುದಾರರಿಗೆ ಕರೆ ಮಾಡಿದಾಗ ನೀನು ಸುಮ್ಮನೆ ಸಮಯ ವ್ಯರ್ಥ ಮಾಡುತ್ತಿದ್ದು, ಬೇರೆ ಕಥೆಗಳನ್ನು ಹೇಳುತ್ತಿದ್ದಿಯಾ ನನಗೆ ಕೊಡಬೇಕಾದ ಕಾಮಗಾರಿ ಮೊತ್ತದ 3% ಅಂದರೆ ರೂ. 15,000/- ಗಳಲ್ಲಿ ರೂ. 5,000/- ಗಳನ್ನು ನಿನಗೆ ಕನ್‌ಶಿಷನ್ ಕೊಡುತ್ತೇನೆ. ಉಳಿದ ರೂ. 10,000/- ಗಳನ್ನು ಈ ದಿನ ಸಂಜೆ ನನಗೆ ತಪ್ಪದೇ ತಂದುಕೊಡಬೇಕೆಂದು ಲಂಚದ ಹಣಕ್ಕಾಗಿ ಒತ್ತಾಯಿಸಿದ್ದನ್ನು, ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿರುತ್ತಾರೆ. ನಂತರ ದೂರುದಾರರು ದಿ: 1-10-2016 ರಂದು ಶಿವಮೊಗ್ಗ ನಗರದ ವಿನೋಬಾ ನಗರ ಪೋಲಿಸ್ ಚೌಕಿ ಹತ್ತಿರವಿರುವ ಮೋರ್ ಪಕ್ಕದಲ್ಲಿರುವ ವೆಲಕಮ್ ಟೇಸ್ಟ ಆಂಡ್ ಈಟ್, ವೆಜ್ ಆಂಡ್ ನಾನ್ ವೆಜ್ ಫಾಸ್ಟಫುಡ್ ಹೋಟೇಲ್‌ನಲ್ಲಿ ಎದುರುದಾರರನ್ನು ಭೇಟಿ ಮಾಡಿದಾಗ ಎದುರುದಾರರು ದೂರುದಾರರಿಂದ ಲಂಚದ ಹಣವಾದ ರೂ. 10,000/- ಗಳನ್ನು ಕೇಳಿ ಪಡೆದುಕೊಂಡು, ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ದೇ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

10. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಜಯಪ್ರಕಾಶ ಜಿ.ಎ. ಬಿನ್ ಲೇಟ್ ಜಿ. ಅಜ್ಜಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಹೊಸನಗರ ಉಪವಿಭಾಗ, ಹೆಚ್ಚುವರಿಯಾಗಿ ಪಂಚಾಯತ್‌ರಾಜ್ ಇಂಜನಿಯರಿಂಗ್ ಉಪವಿಭಾಗ, ಹೊಸನಗರ, ಶಿವಮೊಗ್ಗ ಜಿಲ್ಲೆ ಇವರು ದಿ: 31-04-2021 ರಂದು ಸೇವೆಯಿಂದ ನಿವೃತ್ತಿಯಾಗಿದ್ದು, ಸದರಿಯವರು ಎಸಗಿದ ದುರ್ನಡತೆಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ ನಿಯಮ 2014 (2) (ಬಿ) (i) ಅಡಿಯಲ್ಲಿ ಅನುಮತಿಸಿ, ಕೆ.ಸಿ.ಎಸ್.ಆರ್. (ಸಿಸಿಎ) 14ಎ ರನ್ವಯ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ

12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

5/2/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.